ಪುರಸಭಾ ಕಾರ್ಯಾಲಯ, ಉಳ್ಳಾಲ
ದಕ್ಷಿಣ ಕನ್ನಡ ಜಿಲ್ಲೆ, ಅಂಚೆ : ಉಳ್ಳಾಲ - 575 020
Website : www.ullaltown.gov.in Email : co.ullal@gmail.com
ದೂರವಾಣಿ
ಕಛೇರಿ : 2466226
ಫ್ಯಾಕ್ಸ್ : 2468226
ಸಹಾಯವಾಣಿ : 2462126

ದಿನಾಂಕ: 20–03–2010ನೇ ಶನಿವಾರ ಅಪರಾಹ್ನ ಗಂಟೆ 3–00ಕ್ಕೆ ಸರಿಯಾಗಿ ಉಳ್ಳಾಲ ಪುರಸಭೆಯ ಸ್ಥಾಯಿ ಸಮಿತಿ ಸಭೆಯು ಪುರಸಭಾ ಸ್ಥಾಯಿಸಮಿತಿ ಅಧ್ಯಕ್ಷರಾದ ಶ್ರೀ ಎಂ ಮುಸ್ತಾಫ ಅಬ್ದುಲ್ಲಾ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸ್ಥಾಯಿಸಮಿತಿ ಸಭೆಯ ನಡವಳಿಗಳು.

ಹಾಜರಿ: ಅಧ್ಯಕ್ಷರು ಮತ್ತು ಸದಸ್ಯರು

ವಿಷಯ: 193: ಉಳ್ಳಾಲ ಪುರಸಭೆ ವ್ಯಾಪ್ತಿಯ 5ನೇ ವಾರ್ಡಿನ ಈ ಕೆಳಗಿನ ಕಾಮಗಾರಿಗಳನ್ನು ನಿರ್ವಹಿಸುವಂತೆ ಸ್ಥಳೀಯ ಸದಸ್ಯರಾದ ಶ್ರೀ ಅಬ್ದುಲ್ ರಶೀದ್ ಇವರ ಮನವಿ ಕುರಿತು.
1. ಸಿಲ್ವಾನ್ ಹಂಚಿನ ಕಾರ್ಖಾನೆ ಎದುರುಗಡೆ ಓಣಿಗೆ ಕಾಂಕ್ರೀಟೀಕರಣ/ಇಂಟರ್‌ಲಾಕ್ ಅಳವಡಿಸುವುದು.
2. ಹಾಜಿ ಇಬ್ರಾಹಿಂ ಮನೆಯ ಹಿಂಬದಿ ರಸ್ತೆ ದುರಸ್ತಿಗೊಳಿಸುವುದು.
3. ತೋಟಪ್ರದೇಶಕ್ಕೆ ಎಡಿಬಿ ಯೋಜನೆಯಲ್ಲಿ ಅಳವಡಿಸಿದ ಕೊಳವೆಗೆ 2ಇಂಚಿನ ಹೊಸಕೊಳವೆ ವಿಸ್ತರಿಸುವುದು.
4. ಕೋಡಿ ಕೆಳಗಿನಬೀದಿಗೆ 1 ಹೈಮಾಸ್ಟ್ ದಾರಿದೀಪ ಅಳವಡಿಸುವುದು

ನಿರ್ಣಯ: ಕ್ರ. ಸಂ 1 ರಿಂದ 3 ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ಕಿರಿಯ ಅಭಿಯಂತರರು ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು. ಕ್ರ, ಸಂ. 4 ಅಳವಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 194: ಉಳ್ಳಾಲ ಪುರಸಭೆ ವ್ಯಾಪ್ತಿಯ 20ನೇ ವಾರ್ಡು ಕಾಪಿಕಾಡು ಈಶ್ವರಾನಂದ ಭಜನಾ ಮಂದಿರ ರಸ್ತೆಯ ಅಗಲೀಕರಣ ಮಾಡುವರೇ ಸ್ಥಳೀಯ ಸದಸ್ಯರಾದ ಕು.ಭವಾನಿಯವರ ಮನವಿ ಕುರಿತು.
ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ಕಿರಿಯ ಅಭಿಯಂತರರು ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 195: ಉಳ್ಳಾಲ ಪುರಸಭೆ ವ್ಯಾಪ್ತಿಯ 3ನೇ ವಾರ್ಡಿನ ಮೊಗವೀರಪಟ್ನ ಶ್ರೀ ವ್ಯಾಘ್ರಚಾಮುಂಡೇಶ್ವರಿ ದೇವಸ್ಥಾನದ ವರ್ಷಾವಧಿ ಜಾತ್ರೆಯು ಪ್ರಾರಂಭವಾಗಲಿರುವುದರಿಂದ ದೇವಸ್ಥಾನದ ಪರಿಸರದಲ್ಲಿ 10 ಬಿಳಿ ಸೋಡಿಯಂಲೈಟನ್ನು ಅಳವಡಿಸುವರೇ ಸ್ಥಳೀಯ ಸದಸ್ಯರಾದ ಶ್ರೀಮತಿ ಮೀನಾಕ್ಷಿ ಡಿ ಉಳ್ಳಾಲ್ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಅಳವಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 196: ಉಳ್ಳಾಲ ಪುರಸಭೆ ವ್ಯಾಪ್ತಿಯ 25ನೇ ವಾರ್ಡಿನ ಪಂಡಿತಹೌಸ್ ನಾಮ ನಿರ್ದೇಶಿತ ಸದಸ್ಯರಾದ ಶ್ರೀ ಚಂದ್ರಹಾಸ್ ಪಂಡಿತಹೌಸ್ ಮತ್ತು ಸದಸ್ಯರಾದ ಶ್ರೀಮತಿ ರತ್ನಾವತಿ ಮನೆಯ ಹಿಂದುಗಡೆ ರಸ್ತೆಯನ್ನು ದುರಸ್ತಿಪಡಿಸುವಂತೆ ಸ್ಥಳೀಯ ಸದಸ್ಯರ ಮನವಿ ಕುರಿತು.
ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ಕಿರಿಯ ಅಭಿಯಂತರರು ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ಅಧ್ಯಕ್ಷರ ಅನುಮತಿ ಮೇರೆಗೆ ಬರಬಹುದಾದ ಇನ್ನಿತರ ವಿಷಯಗಳು.
ವಿಷಯ: 197: ಉಳ್ಳಾಲ ಪುರಸಭೆ ವ್ಯಾಪ್ತಿಯ 4ನೇ ವಾರ್ಡಿನ ಮೇಲಂಗಡಿ ದೊಡ್ಡಿ ಎಂಬಲ್ಲಿ ಆಲದ ಮರ ತುಂಬಾ ದೊಡ್ಡದಾಗಿ ಬೆಳೆದಿದ್ದು ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿರುತ್ತದೆ. ಅದನ್ನು ಕಡಿದು ನೆಲ ಸಮ ಮಾಡುವರೇ ಸಾರ್ವಜನಿಕರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಮರವನ್ನು ಕಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 198: ಉಳ್ಳಾಲ ಪುರಸಭಾ ವ್ಯಾಪ್ತಿಯ ಮಿಲ್ಲತ್‌ನಗರ ಮತ್ತು ಮೇಲಂಗಡಿಯ ಪಂಪುಹೌಸಿನ ಬಾಗಿಲು ತುಂಡಾಗಿದ್ದು ದುರಸ್ತಿ ಪಡಿಸುವರೇ ಸೀನಿಯರ್ ವಾಲ್‌ಮ್ಯಾನ್ ಇವರ ವರದಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಲಾಗಿ ದುರಸ್ತಿಪಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 199: ಉಳ್ಳಾಲ ಪುರಸಭಾ ವ್ಯಾಪ್ತಿಯ 7ನೇ ವಾರ್ಡಿನ ದರ್ಗಾಪರಿಸರದ ರಸ್ತೆಯ ಇಕ್ಕೆಲಗಳಲ್ಲಿ ಇರುವ ಮರದ ಕೊಂಬೆಗಳು ದಾರಿದೀಪದ ವಿದ್ಯುತ್ ಕಂಬಕ್ಕೆ ತಾಗುತ್ತಿದ್ದು, ಇದನ್ನು ಕಡಿಸುವರೇ ಸ್ಥಳೀಯ ಸದಸ್ಯರಾದ ಶ್ರೀ ಪಾರೂಕ್ ಉಳ್ಳಾಲ್ ಇವರ ಮನವಿ ಕುರಿತು.

ನಿರ್ಣಯ: ಈ ಬಗ್ಗೆ ಚರ್ಚಿಲಾಗಿ ಕಡಿಸುವುದಾಗಿ ನಿರ್ಣಯಿಸಲಾಯಿತು.

ಸಹಿ. ಅಧ್ಯಕ್ಷರು ಮತ್ತು ಸದಸ್ಯರು

(ಯಥಾಪ್ರತಿ)

ಮುಖ್ಯಾಧಿಕಾರಿ

ಉಳ್ಳಾಲ ಪುರಸಭೆ,ದ.ಕ